ಕೊರ್ನೀಶ್‌ನಲ್ಲಿರುವ ಒಯಿಸ್ಟರ್ ವಾಸ್ತು ಶಿಲ್ಪ





ಕೊರ್ನೀಶ್ ರಾತ್ರಿ ನೋಟ

ನಡೆಸುವ ವಿಶ್ವದ ಪ್ರಥಮ ಅರಬ್ ರಾಷ್ಟ್ರ ಇದಾಗಿದೆ.

ಡಿಸೆಂಬರ್ 18 ಕತಾರಿನ ಸ್ವಾತಂತ್ರ್ಯ ದಿನಾಚರಣೆ. ಈದ್ ಉಲ್ ಫಿತರ್ ಮತ್ತು ಈದ್ ಅಲ್ ಅಝ್ಹಾ ಮುಖ್ಯ ಹಬ್ಬಗಳು. ಅಂದು ಕೊರ್ನೀಶ್ ಬೇರೆಯೇ ರೂಪ ತಾಳುತ್ತದೆ. ಕೊರ್ನೀಶಿನಲ್ಲಿರುವ ಮರಗಳು, ರೌಂಡ್ ಎಬೌಟುಗಳು ಬಣ್ಣ ಬಣ್ಣ ದೀಪಗಳಿಂದ ಝುಗಮಗಿಸುತ್ತವೆ. ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳೂ ಇಲ್ಲೇ ನಡೆಯುತ್ತವೆ.

ಒಂದು ಕಾಲಕ್ಕೆ ಬಡ ರಾಷ್ಟ್ರವಾಗಿದ್ದ ಕತಾರ್ ಈಗ ವಿಶ್ವದ ಅತ್ಯಂತ ಹೆಚ್ಚು ತಲಾ ಆದಾಯವಿರುವ  ರಾಷ್ಟ್ರಗಳಲ್ಲೊಂದು. ಕತಾರ್ ವೀಸಾ ಪಡೆಯಲು ಇಲ್ಲಿನ ಸ್ಥಳೀಯರು , ಸ್ಥಳೀಯ ಸಂಸ್ಥೆ ಅಥವಾ ಸರಕಾರಿ ವಿಭಾಗಗಳ ಪ್ರಾಯೋಜಕರು ಬೇಕು. ಕತಾರಿನಲ್ಲಿ ನಿಮಗಾಗಿ ಯಾರಾದರೂ ವೀಸಾಗಾಗಿ ಮನವಿ ಮಾಡಬೇಕು. 4 ಅಥವಾ 5 ಸ್ಟಾರ್ ಹೋಟೆಲ್‌ಗಳೂ, ಕಾರ್ ಏರ್‌ವೇಸ್ ಸಂಸ್ಥೆಯೂ ನಿಮ್ಮ ವೀಸಾಗಾಗಿ ಮನವಿ ಸಲ್ಲಿಸಬಹುದು.